# JAN DHAN SHIKSHA - I




*Lessons*
*Resources*
*Ideas*

PRADHAN MANTRI JAN-DHAN YOJANA
MERA KHATA BHAGYA VIDHATA

# ಉಳಿತಾಯದ ಅವಶ್ಯಕತೆಯೇನು?



ನಿಯತ ಆದಾಯದಿಂದ ಪಡೆದುಕೊಳ್ಳಲಾಗದ ವಸ್ತುಗಳನ್ನು ಖರೀದಿಸಲು



ಸ್ವಂತ ಮನೆ, ಉನ್ನತ ಶಿಕ್ಷಣವೇ ಮುಂತಾದವುಗಳ ದೊಡ್ಡ ಮೊತ್ತದ ಖರ್ಚುಗಳನ್ನು ಭರಿಸಲು



ಕಾಯಿಲೆ, ಅಪಘಾತ, ಸಾವು, ದುರಂತಗಳೇ ಮುಂತಾದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು



ಇಳಿವಯಸ್ಸಿನಲ್ಲಿ ಅಥವಾ ದುಡಿದು ಸಂಪಾದಿಸಲಾಗದ ಪರಿಸ್ಥಿತಿಯಲ್ಲಿ ನಮ್ಮ ಅವಶ್ಯಕತೆಗಳನ್ನು ಪೂರೈಸಲು

# ಬ್ಯಾಂಕೊಂದರಲ್ಲಿ ಯಾಕೆ ಉಳಿತಾಯ ಮಾಡಬೇಕು?



## ಸುರಕ್ಷೆ:

ಮನೆಯಲ್ಲಿ ಪಟ್ಟಿಗೆಯೊಳಗೆ, ಚಾಪೆಯಡಿಯಲ್ಲಿ ಅಥವಾ ಪರ್ಸುಗಳಲ್ಲಿ ಕೂಡಿಟ್ಟ ಹಣವನ್ನು ಕದ್ದೊಯ್ಯಬಹುದು/ಹಾನಿಗೊಳಿಸಬಹುದು. ಹಾಗೇನೇ ಅದು ನೈಸರ್ಗಿಕ ದುರಂತಗಳಾದ ಪ್ರವಾಹ ಮುಂತಾದವುಗಳ ಸಂದರ್ಭಗಳಲ್ಲಿ ಕೈಜಾರಿ ಹೋಗಬಹುದು. ಹಣವು ಬ್ಯಾಂಕಿನಲ್ಲಿದ್ದರೆ ಹೆಚ್ಚು ಸುರಕ್ಷಿತ.



## ಬೆಳವಣಿಗೆ:

ನಾವು ಬ್ಯಾಂಕ್ ಖಾತೆಯಲ್ಲಿ ತೊಡಗಿಸಿದ ಹಣಕ್ಕೆ ಬಡ್ಡಿ ದೊರೆಯುತ್ತದೆ. ಅದು ನಮ್ಮ ಹಣದ ಮೊತ್ತವು ಬೆಳೆಯಲು ಸಹಕರಿಸುತ್ತದೆ. ಮನೆಯಲ್ಲಿ ಕೂಡಿಟ್ಟ ಹಣ ಬೆಳೆಯುವುದಿಲ್ಲ.



## ಸಾಲಗಳು:

ನಮ್ಮ ಉಳಿತಾಯಗಳು, ನಿರಖು ಠೇವಣಿಗಳು ಅಥವಾ ಆವರ್ತಕ ಠೇವಣಿಗಳ ಆಧಾರದ ಮೇಲೆ ಬ್ಯಾಂಕು ಮನೆ ಖರೀದಿ ಅಥವಾ ಶಿಕ್ಷಣವೇ ಮುಂತಾದ ನಮ್ಮ ಅವಶ್ಯಕತೆಗಳಿಗೆ ಸಾಲಗಳನ್ನು ನೀಡಬಹುದು.

# ನಿಮ್ಮ ಗ್ರಾಹಕರನ್ನು ಅರಿಯಿರಿ(ಕೆವೈಸಿ)

1
- ಖಾತೆಯನ್ನು ತೆರೆಯುವ ಸಂದರ್ಭದಲ್ಲಿ ಗ್ರಾಹಕರ ಗುರುತು ಮತ್ತು ವಿಳಾಸದ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವ ಸಲುವಾಗಿ ಬ್ಯಾಂಕು ಅನುಸರಿಸುವ ಪ್ರಕ್ರಿಯೆಯೇ ಕೆವೈಸಿ.

2
- ಅಧಿಕೃತವಾಗಿ ಸಿಂಧುವೆನಿಸಿರುವ ಕೆವೈಸಿ ದಾಖಲೆ ಪತ್ರಗಳು: 1. ಪಾಸ್‌ಪೋರ್ಟ್ 2. ಡ್ರೈವಿಂಗ್ ಲೈಸನ್ಸ್ 3. ಮತದಾರರ ಗುರುತು ಕಾರ್ಡ್ 4. ಪಾನ್ ಕಾರ್ಡ್ 5. ಆಧಾರ್ ಕಾರ್ಡ್ 6. ಎಂಎನ್‌ಆರ್‌ಇಜಿಎ ಕಾರ್ಡ್

3
- ಈ ದಾಖಲೆಪತ್ರಗಳು ವಿಳಾಸದ ವಿವರಗಳನ್ನೂ ಹೊಂದಿರುವುದಾದರೆ ಅವುಗಳನ್ನು 'ವಿಳಾಸದ ರುಜುವಾತು' ಎಂಬ ನೆಲೆಯಲ್ಲಿಯೂ ಸ್ವೀಕರಿಸಲಾಗುವುದು




ಪಾಸ್‌ಪೋರ್ಟ್




ಎಂಎನ್‌ಆರ್‌ಇಜಿಎ




ಡ್ರೈವಿಂಗ್ ಲೈಸನ್ಸ್



ಭಾವಚಿತ್ರ




ಆಧಾರ್ ಕಾರ್ಡ್




ಪಾನ್ ಕಾರ್ಡ್




ಮತದಾರರ ಗುರುತು ಕಾರ್ಡ್

## ಯಾವುದೇ ಅಧಿಕೃತ ದಾಖಲೆಗಳು ಇಲ್ಲದಿದ್ದ ಪಕ್ಷದಲ್ಲಿ –

ಇತ್ತೀಚೆಗಿನ ಭಾವಚಿತ್ರವನ್ನು ನೀಡಿ ಬ್ಯಾಂಕ್ ಅಧಿಕಾರಿಯ ಉಪಸ್ಥಿತಿಯಲ್ಲಿ ರುಜು ಹಾಕಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಕೊಟ್ಟು ಕೆಲವು ನಿರ್ದಿಷ್ಟ ಷರತ್ತುಗಳೊಂದಿಗೆ 'ಸಣ್ಣ ಖಾತೆ'ಯೊಂದನ್ನು ತೆರೆಯಬಹುದು.

**ಪ್ರಾಪ್ತ ವಯಸ್ಸಿಗೆ ಬಂದಾಗ– ಅಂದರೆ, ಅಪ್ರಾಪ್ತರ ಖಾತೆಗಳಿಗೆ ಸಂಬಂಧಿಸಿದಂತೆ 18 ವರ್ಷ ತುಂಬಿದಾಗ, ಹೊಸದಾಗಿ ಕೆವೈಸಿ ದಾಖಲೆಪತ್ರಗಳನ್ನು ಸಲ್ಲಿಸಬೇಕಾಗುತ್ತದೆ.**

# ಖಾತೆಗಳ ವಿಧಗಳು

## ಬ್ಯಾಂಕ್ ಉಳಿತಾಯ ಖಾತೆ:

- ಖಾತೆಯಿಂದ ಠೇವಣಿಗಳನ್ನು ಹಾಗೂ ಹಣವನ್ನು ಹಿಂದೆಗೆದುಕೊಳ್ಳುವಲ್ಲಿ ನಮನೀಯತೆ.
- ಗ್ರಾಹಕರಿಗೆ ಪಾಸ್ ಪುಸ್ತಕ, ಚೆಕ್ ಪುಸ್ತಕ, ಎಟಿಎಂ ಯಾನೆ ಡೆಬಿಟ್ ಕಾರ್ಡ್‌ಗಳನ್ನು ನೀಡಲಾಗುತ್ತದೆ.
- ಠೇವಣಿ ಇರಿಸಿದ ಮೊತ್ತಕ್ಕೆ ಬಡ್ಡಿ ದೊರೆಯುತ್ತದೆ.

## ಚಾಲ್ತಿ ಖಾತೆ:

- ಚಾಲ್ತಿ ಖಾತೆಗಳನ್ನು ಸಂಸ್ಥೆ/ಕಂಪೆನಿಗಳ ಹೆಸರಿನಲ್ಲಿ ತೆರೆಯಲಾಗುತ್ತದೆ.
- ಆರ್ಥಿಕ ವ್ಯವಹಾರಗಳ ಸಂಖ್ಯೆಗೆ ಯಾವುದೇ ಮಿತಿಯಿರುವುದಿಲ್ಲ.
- ಈ ಖಾತೆಗಳಿಗೆ ಬ್ಯಾಂಕು ಬಡ್ಡಿಯನ್ನು ನೀಡುವುದಿಲ್ಲ.

## ಆವರ್ತಕ ಠೇವಣಿ ಖಾತೆ:

- ಹಣದ ಆವರ್ತಕ ಠೇವಣಿಯು ಒಂದು ನಿಶ್ಚಿತ ಅವಧಿಯದ್ದಾಗಿರುತ್ತದೆ.
- ಆವರ್ತಕ ಠೇವಣಿ ಖಾತೆಯ ಬಡ್ಡಿಯು ಉಳಿತಾಯ ಖಾತೆಯ ಬಡ್ಡಿಗಿಂತ ಹೆಚ್ಚಿರುತ್ತದೆ.
- ಪಕ್ವಗೊಂಡಾಗ ಅಥವಾ ಪಕ್ವತೆಗಿಂತ ಮೊದಲು ಖಾತೆಯನ್ನು ಮುಕ್ತಾಯಗೊಳಿಸುವಾಗ ಹಣದ ಹಿಂಪಡೆಯುವಿಕೆಗೆ ಸಮ್ಮತಿ ಇದೆ.

## ಅವಧಿ ಠೇವಣಿ/ನಿರಖು ಠೇವಣಿ:

- ಅವಧಿ ಠೇವಣಿಗಳು ಏಳು ದಿನಗಳಿಂದ ಹತ್ತು ವರ್ಷಗಳೊಳಗಿನ ನಿಶ್ಚಿತ ಕಾಲಾವಧಿಯನ್ನು ಹೊಂದಿರುತ್ತವೆ.
- ಅವಧಿ ಠೇವಣಿಗಳಿಗೆ ಬ್ಯಾಂಕುಗಳು ಹೆಚ್ಚಿನ ಬಡ್ಡಿ ದರವನ್ನು ನೀಡುತ್ತವೆ.
- ಬಡ್ಡಿಯನ್ನು ಮಾಸಿಕ/ಕಾಲುವಾರ್ಷಿಕವಾಗಿ ಹಿಂಪಡೆಯಬಹುದು ಅಥವಾ ಅದನ್ನು ಸಂಚಿತಗೊಳಿಸಬಹುದು.

## ಸಣ್ಣ ಖಾತೆಗಳು:

'ಸಣ್ಣ ಖಾತೆ' ಯನ್ನು ಇತ್ತೀಚೆಗಿನ ಭಾವಚಿತ್ರವನ್ನು ನೀಡಿ ಹಾಗೂ ಬ್ಯಾಂಕ್ ಅಧಿಕಾರಿಯ ಉಪಸ್ಥಿತಿಯಲ್ಲಿ ಸಹಿ ಎಳೆದು ಅಥವಾ ಹೆಬ್ಬೆಟ್ಟಿನ ಗುರುತು ಹಾಕಿ ತೆರೆಯಬಹುದಾಗಿದೆ. ಅದು ಹನ್ನೆರಡು ತಿಂಗಳುಗಳಿಗೆ ಊರ್ಜಿತದಲ್ಲಿರುತ್ತದೆ. ಯಾವುದೇ ಕಾಲಘಟ್ಟದಲ್ಲಿ ಅದರಲ್ಲಿರುವ ಶಿಲ್ಕು 50,000 ರೂಪಾಯಿಗಳನ್ನು ಮೀರಬಾರದು.

## ಮೂಲ ಬ್ಯಾಂಕ್ ಉಳಿತಾಯ ಠೇವಣಿ ಖಾತೆ:

ಈ ಖಾತೆಗೆ ಕನಿಷ್ಠ ಶಿಲ್ಕಿನ ಅವಶ್ಯಕತೆಯಿರುವುದಿಲ್ಲ.
ಡೆಬಿಟ್ ಕಾರ್ಡ್‌ನ ಸೌಲಭ್ಯವಿರುತ್ತದೆ.
ಬಿಎಸ್‌ಬಿಡಿ ಖಾತೆಯನ್ನು ಹತ್ತು ವರ್ಷಕ್ಕಿಂತ ಮೇಲ್ಪಟ್ಟ ಯಾವ ವ್ಯಕ್ತಿಯೂ ತೆರೆಯಬಹುದು.

# ಸೇವೆಗಳು:

**ಹಣ ರವಾನೆ:**

ಅ. ಬ್ಯಾಂಕು ನಮ್ಮ ಹಣವನ್ನು ಅತ್ಯಂತ ಸುರಕ್ಷಿತವಾಗಿ, ವೇಗವಾಗಿ ಹಾಗೂ ಸಮರ್ಥವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಮತ್ತು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬನಿಗೆ ರವಾನೆ ಮಾಡುತ್ತದೆ.

ಆ. ಈ ಕೆಲಸವನ್ನು ಶಾಖೆ, ಮೈಕ್ರೋ ಎಟಿಎಂನೊಂದಿಗೆ ಬ್ಯಾಂಕ್ ಮಿತ್ರ, ಇಂಟರ್‌ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಎನ್‌ಇಎಫ್‌ಟಿ ಮತ್ತು ಆರ್‌ಟಿಜಿಎಸ್ ಹಂತಗಳಲ್ಲಿ ಮಾಡಬಹುದಾಗಿದೆ.

**ಮೊಬೈಲ್ ಬ್ಯಾಂಕಿಂಗ್:**

ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಫಂಡ್ ವರ್ಗಾವಣೆ, ಐಎಂಪಿಎಸ್ ಮತ್ತು ಬಿಲ್ ಪಾವತಿ.

**ಎಟಿಎಂ ಕಾರ್ಡ್;**

- ಹಣ ಹಿಂಪಡೆಯಲು ಎಲ್ಲ ಎಟಿಎಂ ಗಳಲ್ಲಿ ಹಾಗೂ ಪಿಒಎಸ್ ಯಂತ್ರಗಳಲ್ಲಿ (ಖರೀದಿಗಳಿಗಾಗಿರುವ ನಗದುರಹಿತ ಪಾವತಿಗಳಿಗೆ) ಅಂಗೀಕರಿಸಲಾಗುವುದು.
- ಎಟಿಎಂಗಳಿಂದ ಹಣವನ್ನು ಹಿಂಪಡೆಯುವಾಗ ಹಾಗೇ ಪಿಒಎಸ್ ಗಳಲ್ಲಿ ವ್ಯವಹಾರ ಮಾಡುವಾಗ ವೈಯಕ್ತಿಕ ಗುರುತು ಸಂಖ್ಯೆ(ಪಿಐಎನ್)ಯನ್ನು ಬಳಸಲಾಗುತ್ತದೆ.
- ವೈಯಕ್ತಿಕ ಗುರುತು ಸಂಖ್ಯೆ(ಪಿಐಎನ್)ಯನ್ನು ಆಗೀಗ ಬದಲಾವಣೆ ಮಾಡಿಕೊಳ್ಳತಕ್ಕದ್ದು ಹಾಗೂ ಅದನ್ನು ಬೇರೆ ಯಾರೊಡನೆಯೂ ಹಂಚಿಕೊಳ್ಳತಕ್ಕದ್ದಲ್ಲ.
- ಎಟಿಎಂ ಕಾರ್ಡ್‌ನ್ನು ಅನಕ್ಷರಸ್ಥ ಗ್ರಾಹಕರಿಗೂ ನೀಡಲಾಗುವುದು.
- 'ರುಪೇ ಡೆಬಿಟ್ ಕಾರ್ಡ್ ಅಪ್ಪಟ ದೇಶೀಯ ಡೆಬಿಟ್ ಕಾರ್ಡ್ ಆಗಿದ್ದು ಅದನ್ನು ಒಂದು ಲಕ್ಷ ರೂಪಾಯಿಗಳ ಅಂತರ್ಗತ ಅಪಘಾತ ವಿಮಾ ಸೌಲಭ್ಯದೊಂದಿಗೆ 'ನ್ಯಾಶನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ'(ಎನ್‌ಪಿಸಿಐ)ಸಂಸ್ಥೆಯು ಪರಿಚಯಿಸಿದೆ.

**ಇಂಟರ್‌ನೆಟ್ ಬ್ಯಾಂಕಿಂಗ್:**

- ಇಂಟರ್‌ನೆಟ್ ಬ್ಯಾಂಕಿಂಗ್ ಒಂದು ಎಲೆಕ್ಟ್ರಾನಿಕ್ ಪಾವತಿ ವ್ಯವಸ್ಥೆಯಾಗಿದೆ.
- ನಿಧಿ ವರ್ಗಾವಣೆ, ಬಿಲ್ ಪಾವತಿ, ಖಾತೆ ವಿಚಾರಣೆ, ಟಿಕೆಟ್ ಬುಕ್ಕಿಂಗ್, ಆನ್‌ಲೈನ್ ಶಾಪಿಂಗ್ ವ್ಯವಸ್ಥೆಗಳನ್ನೂ ಒದಗಿಸುತ್ತದೆ.

**ಸಾಲ:**

- ಮನೆ, ಕಾರು, ಗೃಹೋಪಯೋಗಿ ಸರಕುಗಳ ಖರೀದಿಗೆ ಹಾಗೂ ಶಿಕ್ಷಣ ಮುಂತಾದವುಗಳಿಗೆ ಬ್ಯಾಂಕುಗಳು ಸಾಲಗಳನ್ನು ನೀಡುತ್ತವೆ.
- ಕೃಷಿ, ಉದ್ಯಮ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಂತಹ ಆರ್ಥಿಕ ಚಟುವಟಿಕೆಗಳಿಗೆ ಕೂಡ ಸಾಲಗಳನ್ನು ಒದಗಿಸಲಾಗುತ್ತದೆ.
- ಜೂಜಿನಂತಹ ನ್ಯಾಯಬಾಹಿರ ಚಟುವಟಿಕೆಗಳಿಗೆ ಸಾಲಗಳನ್ನು ನೀಡಲಾಗುವುದಿಲ್ಲ.
- ಮಾರವಾಡಿಗಳು ಹೊರಿಸುವ ಬಡ್ಡಿ ದರಕ್ಕೆ ಹೋಲಿಸಿದರೆ ಬ್ಯಾಂಕ್ ಸಾಲಗಳ ಬಡ್ಡಿ ದರವು ತುಂಬ ಕಡಿಮೆಯಾಗಿರುತ್ತದೆ.

**ಓವರ್ ಡ್ರಾಫ್ಟ್:**

ಮಂಜೂರಾದ ಮಿತಿಯವರೆಗೆ ಹೆಚ್ಚುವರಿ ಹಣವನ್ನು ಬ್ಯಾಂಕುಗಳಿಂದ ಪಡೆಯುವುದು.

**ಪಿಂಚಣಿ:**

ಅಟಲ್ ಪಿಂಚಣಿ ಯೋಜನೆಯಡಿಯಲ್ಲಿ ರೂ. 1,000 ದಿಂದ ರೂ. 5,000 ದವರೆಗಿನ ಖಚಿತ ಪಿಂಚಣಿ (18 ರಿಂದ 40 ವರ್ಷಗಳು) ಲಭ್ಯ.

# ಸಾಮಾಜಿಕ ಭದ್ರತೆ ಯೋಜನೆಗಳು:

## ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ:

- ಪ್ರಧಾನ ಮಂತ್ರಿ ಜನ್ ಧನ್ ಯೋಜನೆ(ಪಿಎಂಜೆಡಿವೈ)ಯನ್ನು 2014ರ ಅಗೋಸ್ತು 28ರಂದು ಮಾನ್ಯ ಪ್ರಧಾನ ಮಂತ್ರಿಯವರು ಪ್ರಾರಂಭಿಸಿದರು.
- ಬ್ಯಾಂಕ್ ಖಾತೆಯನ್ನು ತೆರೆಯುವುದರ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶಗಳ ಕುಟುಂಬಗಳನ್ನು ಒಳಗೊಳ್ಳುವತ್ತ ಯೋಜನೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದೆ.
- ಹತ್ತು ವರ್ಷಕ್ಕೆ ಮೇಲ್ಪಟ್ಟ ಓರ್ವ ಅಪ್ರಾಪ್ತನೂ ಕೂಡ ಯಾವುದೇ ಬ್ಯಾಂಕಿನಲ್ಲಿ ತನ್ನ ಖಾತೆಯನ್ನು ತೆರೆಯಬಹುದಾಗಿದೆ.
- ರುಪೇ ಡೆಬಿಟ್ ಕಾರ್ಡ್ ಗ್ರಾಹಕನಿಗೆ ಯಾವುದೇ ದಂಡವಿಲ್ಲದೆ ರೂ. ಒಂದು ಲಕ್ಷದ ಅಂತರ್ಗತ ಅಪಘಾತ ವಿಮಾ ಸೌಲಭ್ಯವನ್ನು ಒದಗಿಸುತ್ತದೆ.
- ಅಂತರ್ಗತ ಅಪಘಾತ ವಿಮಾ ಸೌಲಭ್ಯವನ್ನು ಪಡೆದುಕೊಳ್ಳಬೇಕಾದರೆ ರುಪೇ ಡೆಬಿಟ್ ಕಾರ್ಡ್‌ನ್ನು ಪ್ರತಿ 45 ದಿನಕ್ಕೊಮ್ಮೆಯಾದರೂ ಬಳಸತಕ್ಕದ್ದು.
- ರೂ. 5,000ದವರೆಗಿನ ಓವರ್ ಡ್ರಾಫ್ಟ್ ಸೌಲಭ್ಯವು ಕುಟುಂಬದ ಒಬ್ಬ ಖಾತೆದಾರನಿಗೆ ಸದ್ರಿ ಖಾತೆಯನ್ನು ತೃಪ್ತಿಕರವಾಗಿ ನೋಡಿಕೊಂಡ ಆರು ತಿಂಗಳುಗಳ ಬಳಿಕವೇ ಲಭ್ಯವಿರುತ್ತದೆ.

Pradhan Mantri Suraksha Bima Yojana

## ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ:

- ಪಿಎಂಎಸ್‌ಬಿವೈ ಎನ್ನುವುದು ಒಂದು ಅಪಘಾತ ವಿಮಾ ಯೋಜನೆಯಾಗಿದ್ದು ಅಪಘಾತವಾಗಿ ಸತ್ತರೆ ಅಥವಾ ಅಂಗವೈಕಲ್ಯ ಬಂದರೆ ಈ ಯೋಜನೆಯಡಿಯಲ್ಲಿ ಖಾತೆದಾರನಿಗೆ ರೂ. ಎರಡು ಲಕ್ಷದವರೆಗಿನ ವಿಮಾ ಹಣವು ದೊರೆಯುತ್ತದೆ.
- 2. ಬ್ಯಾಂಕ್ ಉಳಿತಾಯ ಖಾತೆ ಹೊಂದಿರುವ 18ರಿಂದ 70 ವರ್ಷದೊಳಗಿನ ಎಲ್ಲರೂ ಈ ಯೋಜನೆ ಸೇರಿಕೊಳ್ಳಲು ಅಹ9ರಿರುತ್ತಾರೆ. ಪ್ರತಿ ಸದಸ್ಯನು ವಾರ್ಷಿಕ 12 ರೂ. ಪ್ರೀಮಿಯಂ ಪಾವತಿಸಬೇಕಾಗುತ್ತದೆ ಹಾಗೂ ಅದನ್ನು ಪ್ರತಿ ವರ್ಷ ನವೀಕರಿಸಬೇಕಾಗುತ್ತದೆ.

## ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ:

- ಪಿಎಂಜೆಜೆಬಿವೈ ಎನ್ನುವ ಬಿಮಾ ಯೋಜನೆಯು ಯಾವುದೇ ಕಾರಣಕ್ಕೆ ಸಾವು ಸಂಭವಿಸಿದರೆ ರೂ. ಎರಡು ಲಕ್ಷದ ವಿಮಾ ಮೊತ್ತವನ್ನು ನೀಡುವುದು.
- ಈ ಯೋಜನೆಯು ಬ್ಯಾಂಕ್ ಶಾಖೆಗಳು/ಬ್ಯಾಂಕ್ ಮಿತ್ರಗಳಲ್ಲಿ ಲಭ್ಯವಿರುತ್ತವೆ.
- 18ರಿಂದ 50 ವರ್ಷದೊಳಗಿನ ಎಲ್ಲ ಬ್ಯಾಂಕ್ ಉಳಿತಾಯ ಖಾತೆದಾರರು ಈ ಯೋಜನೆ ಸೇರಿಕೊಳ್ಳಲು ಅಹ9ರಿರುತ್ತಾರೆ.
- ಪ್ರತಿ ಸದಸ್ಯನಿಗೆ ವಾರ್ಷಿಕ ರೂ. 330 ಪ್ರೀಮಿಯಂ ಹಾಗೂ ಸೇವಾ ತೆರಿಗೆ ಪ್ರತ್ಯೇಕ. ವಾರ್ಷಿಕ ನೆಲೆಯಲ್ಲಿ ನವೀಕರಿಸಬಹುದಾಗಿದೆ.

# ಪ್ರಧಾನಮಂತ್ರಿ ಮುದ್ರಾ ಯೋಜನೆ (ಪಿಎಂಎಂವೈ)

- **ಗೌರವಾನ್ವಿತ ಪ್ರಧಾನ ಮಂತ್ರಿಯವರು 'ಪ್ರಧಾನ ಮಂತ್ರಿ ಮುದ್ರಾ ಯೋಜನೆ' (ಪಿಎಂಎಂವೈ)ಗೆ 'ಸ್ಮಾಲ್ ಇಂಡಸ್ಟ್ರೀಸ್ ಡೆವೆಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ'(ಎಸ್‌ಐಡಿಬಿಐ)ದ ಅಧೀನ ವ್ಯವಸ್ಥೆಯ ನೆಲೆಯಲ್ಲಿ 08.04.2015ರಂದು ಚಾಲನೆ ನೀಡಿದರು.**
- ಕಾರ್ಪೊರೇಟೇತರ ಸಣ್ಣ ಉದ್ಯಮ ಕ್ಷೇತ್ರ(ಎನ್‌ಸಿಎಸ್‌ಬಿಎಸ್)ಕ್ಕೆ ಹಣಕಾಸು ಸೌಲಭ್ಯಗಳ ಕುರಿತಂತೆ ಅಧಿಕೃತ ಅವಕಾಶಗಳನ್ನು ಒದಗಿಸುವುದು.
- ಆರ್ಥಿಕತೆಯ ನಿಧಿಯುಕ್ತವಲ್ಲದ ವಿಭಾಗಗಳಾದ ಸಣ್ಣ ಉತ್ಪಾದನಾ ಘಟಕಗಳು, ಅಂಗಡಿ ಮಾಲೀಕರು, ಹಣ್ಣು ಹಂಪಲು/ತರಕಾರಿ ಮಾರಾಟಗಾರರು, ಟ್ರಕ್ ಮತ್ತು ಟ್ಯಾಕ್ಸಿಗಳ ಆಪರೇಟರುಗಳು, ಆಹಾರ ಸೇವಾ ಘಟಕಗಳು, ದುರಸ್ತಿ ಅಂಗಡಿಗಳು, ಗುಡಿ ಕೈಗಾರಿಕೆಗಳು, ಕುಶಲಕರ್ಮಿಯ ಆಹಾರ ಸಂಸ್ಕರಣಾ ಘಟಕಗಳು, ಬೀದಿ ವ್ಯಾಪಾರಿಗಳು ಹಾಗೂ ಅಂತಹ ಇತರ ಅನೇಕ ವಿಭಾಗಗಳಿಗೆ ಬ್ಯಾಂಕ್ ಹಣಕಾಸು ನೆರವಿನ ಭರವಸೆಯನ್ನು ನೀಡುವುದು.

**ಮುದ್ರಾ ವಿಷನ್:**

**'ಪಿರಮಿಡ್ ವಿಶ್ವ'ದ ತಳಮಟ್ಟದಲ್ಲಿರುವವರ ಸಮಗ್ರ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಾಗಿ ಅತ್ಯುತ್ತಮ ಪ್ರಾಪಂಚಿಕ ವಿಧಿ ವಿಧಾನಗಳು ಮತ್ತು ಗುಣಮಟ್ಟಗಳಿಂದ ಗುರುತಿಸಲ್ಪಟ್ಟ ಶ್ರೇಷ್ಠ ಸರ್ವಾಂಗೀಣ ಆರ್ಥಿಕ ಹಾಗೂ ಪೋಷಕ ಸೇವೆಗಳ ನೀಡಿಕೆದಾರನಾಗುವುದು.**

**ಮುದ್ರಾ ಮಿಷನ್:**

**ಆರ್ಥಿಕ ಯಶಸ್ಸು ಮತ್ತು ಹಣಕಾಸಿನ ಭದ್ರತೆಯನ್ನು ಸಾಧಿಸಲು ನಮ್ಮ ಪಾಲುದಾರ ಸಂಸ್ಥೆಗಳೊಂದಿಗೆ ಸೇರಿಕೊಂಡು ಸಮ್ಮಿಳಿತ, ಸದೃಢ ಮತ್ತು ಮೌಲ್ಯಾಧಾರಿತ ಔದ್ಯಮಿಕ ಸಂಸ್ಕೃತಿಯೊಂದನ್ನು ಹುಟ್ಟು ಹಾಕುವುದು.**

**ಮುದ್ರಾ ಉದ್ದೇಶ:**

**ಪಾಲುದಾರ ಸಂಸ್ಥೆಗಳನ್ನು ಬೆಂಬಲಿಸಿ ಉತ್ತೇಜಿಸುವುದರೊಂದಿಗೆ ಅತಿ ಸಣ್ಣ ಉದ್ಯಮಗಳ ಕ್ಷೇತ್ರಕ್ಕಾಗಿರುವ ಬೆಳವಣಿಗೆಯ ಜೀವ ಪರಿಸರ ವ್ಯವಸ್ಥೆಯೊಂದನ್ನು ಸೃಷ್ಟಿಸುವುದರ ಮೂಲಕ ಸಮ್ಮಿಳಿತ ಹಾಗೂ ಸದೃಢವಾದ ವಿಧಾನವೊಂದರಲ್ಲಿ ಪ್ರಗತಿಯನ್ನು ಸಾಧಿಸುವುದು ನಮ್ಮ ಮೂಲಭೂತ ಉದ್ದೇಶ.**

**ಪ್ರಶ್ನೆ: 'ಮುದ್ರಾ'ದಡಿಯಲ್ಲಿ ತಾಂತ್ರಿಕ ಪದವೀಧರರೂ ಕೂಡ ಸಾಲವನ್ನು ಪಡೆದುಕೊಳ್ಳಬಹುದು ಎನ್ನುವುದು ನಿಮಗೆ ಗೊತ್ತಿದೆಯೇ?**

**ಉತ್ತರ: ನಿಯಮಾವಳಿಗಳ ಪ್ರಕಾರ, 'ಮುದ್ರಾ'ದ ಮಧ್ಯವರ್ತಿ ಸಂಸ್ಥೆಗಳಲ್ಲಿ ಯಾವುದಾದರೂ ಒಂದರಿಂದ ಉದ್ಯಮದ ಸ್ವರೂಪ ಮತ್ತು ಪ್ರಾಜೆಕ್ಟ್ ಅವಶ್ಯಕತೆಗಳಿಗನುಗುಣವಾಗಿ ಹಣಕಾಸು ನೆರವನ್ನು ಪಡೆದುಕೊಳ್ಳಬಹುದಾಗಿದೆ.**

## ಸಾಲದ ಪ್ರವರ್ಗಗಳು

| ಶಿಶು | ಕಿಶೋರ್ | ತರುಣ್ |
| --- | --- | --- |
| ರೂ. 50,000ದವರೆಗೆ ಸಾಲ | ರೂ. 50,000ದಿಂದ 5 ಲಕ್ಷದವರೆಗೆ ಸಾಲ | ರೂ. 5 ಲಕ್ಷದಿಂದ ಹತ್ತು ಲಕ್ಷದವರೆಗೆ ಸಾಲ |

ಪಾರ್ಶ್ವಿಕ ಭದ್ರತೆಯಿಂದ ಮುಕ್ತವಾಗಿದೆ

ಶಿಶು ಸಾಲಕ್ಕೆ ಪರಿಶೀಲನಾ ಶುಲ್ಕ ಮತ್ತು 'ಮಾರ್ಜಿನ್' ಹಣವಿರುವುದಿಲ್ಲ







ಉತ್ಪಾದನೆ, ಸಂಸ್ಕರಣೆ, ವ್ಯಾಪಾರ, ಅಥವಾ ಸೇವಾ ಕ್ಷೇತ್ರದಂತಹ ಕೃಷಿಯೇತರ ಕ್ಷೇತ್ರದ ಆದಾಯ ತರುವ ಚಟುವಟಿಕೆಯಿಂದ ಕೂಡಿದ ಔದ್ಯಮಿಕ ಯೋಜನೆ ಹೊಂದಿರುವ ಯಾವುದೇ ಭಾರತೀಯ ಪ್ರಜೆ ಮತ್ತು

ಯಾರಿಗೆ 10 ಲಕ್ಷಕ್ಕಿಂತ ಕಡಿಮೆ ಸಾಲದ ಅವಶ್ಯಕತೆಯಿದೆಯೋ ಅಂತಹ ಯಾವುದೇ ವ್ಯಕ್ತಿ

ಮುದ್ರಾ ಕಾರ್ಡ್ ರುಪೇ ಡೆಬಿಟ್ ಕಾರ್ಡ್ ಆಗಿದ್ದು ಅದು ದುಡಿಯುವ ಬಂಡವಾಳ ವ್ಯವಸ್ಥೆಯ ಸೌಲಭ್ಯವನ್ನು ಓವರ್ ಡ್ರಾಫ್ಟ್ ರೂಪದಲ್ಲಿ ಒದಗಿಸುತ್ತದೆ ಹಾಗೂ ಅದನ್ನು ಎಟಿಎಂ, ಬ್ಯಾಂಕ್ ಮಿತ್ರ ಮತ್ತು ಪಿಒಎಸ್‌ಗಳಲ್ಲಿ ಬಳಸಬಹುದಾಗಿದೆ.

## ಪಿಎಂಎಂವೈ ಯನ್ನು ಪಡೆಯುವುದು ಹೇಗೆ?



ಸಾಲ ಪಡೆದುಕೊಳ್ಳುವವರು

ಸಮರ್ಪಕ ಉದ್ಯಮ ವಿಚಾರ

ಸಾಲದ ಅರ್ಜಿ




ಸಾರ್ವಜನಿಕ/ಖಾಸಗಿ ಕ್ಷೇತ್ರದ ವಾಣಿಜ್ಯ ಬ್ಯಾಂಕ್, ಆರ್‌ಆರ್‌ಬಿ ಅಥವಾ ಸಹಕಾರಿ ಬ್ಯಾಂಕ್

ಸಾಲದ ಅರ್ಜಿಯ ಪರಿಶೀಲನೆ

ಸಾಲದ ದಾಖಲೆ ಪತ್ರಗಳ ನಿರ್ವಹಣೆ

ಸಾಲದ ಮಂಜೂರಾತಿ/ಬಟವಾಡೆ